ಅಧ್ಯಕ್ಷರು : `ಶ್ರೀ ಕರಿಯಣ್ಣನವರೇ, ತಮ್ಮ ಪ್ರಶ್ನೆಯನ್ನು ವಾರ್ತಾ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ ಅದು ಅವರಿಗೇ ಬರುತ್ತದೆ. ಸಮಾಜ ಕಲ್ಯಾಣ ಇಲಾಖೆಯವರು ಹಣ ಕೊಡದೆ ವಾರ್ತಾ ಇಲಾಖೆಯವರು ಟಿ ವಿ ಕೊಡುವುದಕ್ಕೆ ಬರುವುದಿಲ್ಲ. ಇದನ್ನು ಸ್ಪೆಷಲ್ ಕಾಂಪೋನೆಂಟ್ನಲ್ಲಿ ಕೊಡುವುದು. ಮಾನ್ಯ ಸಮಾಜ ಕಲ್ಯಾಣ ಮಂತ್ರಿಯವರು ಇದರ ಬಗ್ಗೆ ಹೇಳಬೇಕಾಗುತ್ತದೆ. ಏಕೆಂದರೆ, ಅದು ಅವರ ಖಾತೆಗೆ ಸೇರಿದ ವಿಷಯ. ಈಗ ಸ್ಪೆಷಲ್ ಕಾಂಪೊಸೆಂಟ್ ಪ್ರೋಗ್ರಾಮ್ನಲ್ಲಿ ಟಿವಿ ಗಳನ್ನು ಹರಿಜನ ಗಿರಿಜನ ಕೇರಿಗೆ ಕೊಟ್ಟಿತ್ತು. ಈಗ ವಾರ್ತಾ ಇಲಾಖೆಗೆ ಟ್ರಾನ್ಸ್ಫರ್ ಮಾಡಿದ್ದೀರಿ. ಅದು ಸಮಾಜ ಕಲ್ಯಾಣ ಇಲಾಖೆಗೆ ಬರುವುದು. ದುಡ್ಡು ಕೊಡುವವರು ಅವರು. ದುಡ್ಡು ಕೊಡದೆ ಅವರು ಟಿ.ವಿ. ಹೇಗೆ ಕೊಡುವುದಕ್ಕೆ ಬರುತ್ತದೆ ?

ಶ್ರೀ ಧರ್ಮಸಿಂಗ್ : ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ನಾನೇ ಇದಕ್ಕೆ ಉತ್ತರ ಕೊಡಬೇಕಾಗಿತ್ತು. ಮುಖ್ಯ ಮಂತ್ರಿಗಳು ನಾನೇ ಮಂಗಳವಾರ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಅವರು ಮಂಗಳವಾರದಂದು ಉತ್ತರ ಕೊಡುತ್ತಾರೆ.

ಬೇಲೂರು ಕೈಗಾರಿಕಾ ವಲಯದ ಸಣ್ಣ ಪ್ರಮಾಣದ ಘಟಕಗಳಿಗೆ ಸಹಾಯಧನ

470 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಸಮೀಪವಿರುವ ಬೇಲೂರು ಇಂಡಸ್ಟ್ರೀಯಲ್ ಏರಿಯಾದಲ್ಲಿ ಎಷ್ಟು ಚಿಕ್ಕ ಕೈಗಾರಿಕೋದ್ಯಮಗಳನ್ನು ಪ್ರಾರಂಭಿಸಲಾಗಿದೆ. (ಆ ಉದ್ಯಮಗಳ ಹೆಸರು, ಮೊತ್ತ ಉಳಿದ ಎಲ್ಲಾ ಮಾಹಿತಿಗಳನ್ನು ಕೊಡುವುದಾಗಬೇಕು);

ಆ) ಸದರಿ ಪ್ರದೇಶದಲ್ಲಿ ಸ್ಥಾಪಿಸಲಾದ ಚಿಕ್ಕ ಉದ್ಯಮದಾರರಿಗೆ ಎಷ್ಟು ಹಣ ಸಬ್ಸಿಡಿಯನ್ನು ಇಲ್ಲಿಯವರೆಗೆ ಸರ್ಕಾರದಿಂದ ಕೊಡಲಾಗಿದೆ ಮತ್ತು ಇನ್ನು ಎಷ್ಟು ಹಣ ಕೊಡಬೇಕಾಗಿದೆ (ಎಲ್ಲಾ ಉದ್ದಿಮೆದಾರರ ಹೆಸರು ಹಾಗೂ ಅವರಿಗೆ ಸಲ್ಲಿಸತಕ್ಕ ಸಂಪೂರ್ಣ ವಿವರವನ್ನು ಕೊಡುವುದು);

ಇ) ಈ ಸಣ್ಣ ಉದ್ದಿಮೆದಾರರಿಗೆ ಸಬ್ಸಿಡಿಯನ್ನು ಕೊಡುವುದರಲ್ಲಿ ಬಹಳ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ರೀತಿ ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಜರೂರುಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):

ಅ) ಬೇಲೂರು ಕೈಗಾರಿಕಾ ವಲಯದಲ್ಲಿ ಹತ್ತು ಚಿಕ್ಕ ಉದ್ದಿಮೆಗಳು ಸ್ಥಾಪಿಸಲ್ಪಟ್ಟಿವೆ. ಅವುಗಳ ವಿವರಗಳನ್ನು ಅನುಬಂಧ 'ಅ' ದಲ್ಲಿ ನೀಡಲಾಗಿದೆ.

ಆ) ಸಹಾಯಧನ ಮಂಜೂರಾಗಿ ಬಿಡುಗಡೆ ಮಾಡಬೇಕಾದ ವಿವರಗಳನ್ನು ಅನುಬಂಧ 'ಆ' ದಲ್ಲಿ ನೀಡಲಾಗಿದೆ.

ಇ) ಸಣ್ಣ ಕೈಗಾರಿಕೆಗಳಿಗೆ ವಿಶೇಷವಾಗಿ ವಲಯ-4ರಲ್ಲಿ (ಬೇಲೂರು ಕೈಗಾರಿಕಾ ಕ್ಷೇತ್ರ) ಸ್ಥಾಪಿಸಲ್ಪಡುವ ಕೈಗಾರಿಕೆಗಳಿಗೆ ಆದ್ಯತೆ ಮೇರೆಗೆ ಮಂಜೂರಾದ ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತಿದೆ. ಬೇಲೂರು ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈಗಾಗಲೇ 30-4-1993ರವರೆಗೆ ಮಂಜೂರಾತಿ ಪಡೆದ ಎಲ್ಲಾ ಹಣ ಕೈಗಾರಿಕೆಗಳಿಗೆ ಈಗಾಗಲೇ ಸಹಾಯಧನವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಲಾಗಿದೆ. ಮೇ 1993ರ ನಂತರ ಮಂಜೂರಾತಿ ಪಡೆದ ಉಳಿದ 4 ಕೈಗಾರಿಕೆಗಳಿಗೆ ಸಹಾಯಧನವನ್ನು ಮುಂಬರುವ ತಿಂಗಳುಗಳಲ್ಲಿ ಹಣ ಬಿಡುಗಡೆ ಮಾಡಲಾಗುತ್ತದೆ.

ಅನುಬಂಧ – ಅ

ಬೇಲೂರು ಕೈಗಾರಿಕಾ ವಲಯದಲ್ಲಿ ಸ್ಥಾಪಿಸಲ್ಪಟ್ಟ ಚಿಕ್ಕ ಉದ್ದಿಮೆಗಳ ವಿವರಗಳು ಈ ಕೆಳಕಂಡಂತಿವೆ

ಕ್ರಮ ಸಂಖ್ಯೆ	ಉದ್ಯಮದ ಹೆಸರು	ಉತ್ಪಾದನಾ ವಸ್ತು	ಬಂಡವಾಳ ಹೂಡಿಕೆ ರೂ.	ಉದ್ಯೋಗಿಗಳ ಸಂಖ್ಯೆ
1.	ಮಂಗಳಾ ಆಗ್ರೋ ಇಂಡಸ್ಟ್ರೀಸ್ ಪ್ರೈ. ಲಿ.	ವೆಜಿಟೆಬಲ್ ಮತ್ತು ಡಿ ಆಯಿಲ್ ಕೇಕ್	32,89,500	25
2.	ಎಸ್. ಡಿ. ಎಂಟರ್‌ಪ್ರೈಸಸ್	ಸಿಮೆಂಟ್ ಹಲೋ ಕಾಂಕ್ರೀಟ್ ಬ್ರಿಕ್ಸ್	4,94,000	10
3.	ಸುಮಂಗಳಾ ಆಗ್ರೋ ಫೀಡ್ಸ್ ಪ್ರೈ. ಲಿ.	ಕೋಳಿ ಮತ್ತು ದನಗಳ ಆಹಾರ	33,20,000	25
4.	ಆರಾವಳಿ ಮಾರ್ಬಲ್ಸ್ ಇಂಡಸ್ಟ್ರೀಸ್	ಮಾರ್ಬಲ್ ಸ್ಟೋನ್ ಕಟಿಂಗ್ ಆಂಡ್ ಪಾಲಿಶಿಂಗ್	58,04,800	20
5.	ದೇಶನೂರ್ ಆಯಿಲ್ ಇಂಡಸ್ಟ್ರೀಸ್	ಕಾಟನ್ ಸೀಡ್ ಆಯಿಲ್ ಮತ್ತು ಕಾಟನ್‌ಜಿನ್ನಿಂಗ್	1,01,14,257	80
6.	ಕುಮಾರ್ ಇಂಡಸ್ಟ್ರೀಸ್	ಕಾಟನ್ ಜಿನ್ನಿಂಗ್ ಮತ್ತು ಕಾಟನ್ ಸೀಡ್ ಆಯಿಲ್ ಕೇಕ್	54,56,918	60
7.	ಮೋಹನ್ ಇಂಡಸ್ಟ್ರೀಸ್	ಕಾಟನ್ ಜಿನ್ನಿಂಗ್	21,99,576	40
8.	ಎಕ್ಸ್‌ಟ್ರಾಕ್ಟ್ ಇಂಜಿನಿಯರಿಂಗ್ ವರ್ಕ್ಸ್	ಇಂಡಸ್ಟ್ರಿಯಲ್ ಮೆಶಿನರಿ, ಪೊಲ್ಯೂಷನ್ ಕಂಟ್ರೋಲ್ ಸಿಸ್ಟಮ್ಸ್	55,47,194	30
9.	ಸಿದ್ದೇಶ್ವರ ಫೆಲೋ ಅಲಾಯ್ಸ್	ಫೆರೋ ಮ್ಯಾಂಗನೀಸ್	ಸಹಾಯಧನ ಮಂಜೂರಿಗೆ ಅರ್ಜಿ ಸಲ್ಲಿಸಿದ್ದಾರೆ	15
10.	ಸ್ವಾಮಿ ಅಯ್ಯಪ್ಪಾ ಪ್ಲಾಸ್ಟಿಕ್ ಇಂಡಸ್ಟ್ರೀಸ್	ಪ್ಲಾಸ್ಟಿಕ್ ಗ್ರ್ಯಾನುವೆಲ್ಸ್	3,60,26,245	310

(ಪಿ. ಜಿ. ಪ್ರಸಾದ್)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈಅ)
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ

ಅನುಬಂಧ – ೮

ಸಹಾಯಧನ ಮಂಜೂರಾಗಿ ಬಿಡುಗಡೆ ಮಾಡಿದ ವಿವರಗಳು

ಕ್ರಮ ಸಂಖ್ಯೆ	ಉದ್ಯಮದ ಹೆಸರು	ಬಿಡುಗಡೆ ಮಾಡಿದ ಹಣದ ಮೊತ್ತ	ಬಿಡುಗಡೆಯಾದ ದಿನಾಂಕ
	ಮೆಸರ್ಸ್:		
1.	ಮಂಗಳಾ ಆಗ್ರೋ ಇಂಡಸ್ಟ್ರೀಸ್ ಪ್ರೈ. ಲಿ.	4,19,410	11-06-91
2.	ಎಸ್. ಡಿ. ಎಂಟರ್‌ಪ್ರೈಸಸ್	74,100	30-11-92
3.	ಸುಮಂಗಳಾ ಆಗ್ರೋ ಫೀಡ್ಸ್ ಪ್ರೈ. ಲಿ.	4,23,000	24-04-92
4.	ಆರಾವಳಿ ಮಾರ್ಬಲ್ಸ್ ಇಂಡಸ್ಟ್ರೀಸ್	5,39,000	24-04-92
		5,48,600	17-07-92
		3,13,600	16-08-93
		23,17,710	

ಸಹಾಯಧನ ಮಂಜೂರಾಗಿ ಹಣ ಬಿಡುಗಡೆ ಮಾಡಬೇಕಾಗಿರುವ ಘಟಕಗಳ ವಿವರಗಳು

ಕ್ರ. ಸಂ.	ಉದ್ಯಮದ ಹೆಸರು	ಮಂಜೂರಾದ ಮೊತ್ತ	ಮಂಜೂರಾದ ದಿನಾಂಕ
1.	ದೇಶನೂರ್ ಆಯಿಲ್ ಇಂಡಸ್ಟ್ರೀಸ್	21,25,000	27-05-93
2.	ಕುಮಾರ್ ಇಂಡಸ್ಟ್ರೀಸ್	11,59,500	19-07-93
3.	ಮೋಹನ್ ಇಂಡಸ್ಟ್ರೀಸ್	4,67,300	10-05-93
4.	ಎಕ್ಸ್‌ಟ್ರಾಕ್ಟ್ ಇಂಜಿನಿಯರಿಂಗ್ ವರ್ಕ್ಸ್	11,78,700	10-07-93
		49,30,500	-

ಸಹಾಯಧನ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿರುವ ಘಟಕಗಳು

೧. ಮೆ: ಸಿದ್ದೇಶ್ವರ ಫೆಲೋ ಅಲಾಯ್ಸ್ ಪ್ರೈ. ಲಿ.

೨. ಮೆ: ಅಯ್ಯಪ್ಪಸ್ವಾಮಿ ಪ್ಲಾಸ್ಟಿಕ್ಸ್ ಇಂಡಸ್ಟ್ರೀಸ್

ANNEXURE - A

THE DETAILS OF SMALL SCALE INDUSTRIES WHICH WERE ESTABLISHED IN BELUR INDUSTRIAL ZONE IS AS FOLLOWS

Sl. No.	Name of the Industry	Manufacturing item	Investment thereon	No. of Employment
1.	Mangala Agro Industries (P) Ltd.	Vegetables Oil & De-Oil Cake	32,89,500	25
2.	S.D. Enterprises	Cement Hallow Concrete Bricks	4,94,000	10
3.	Sumangala Agro Feeds (P) Ltd.	Poultry & Animal Feeds	33,20,000	25
4.	Aravali Marbles Industries	Marble Stone Cutting and Polishing	58,04,800	20
5.	Deshnoor Oil Industries	Cotton Seed Oil and Cotton Ginning	101,14,257	80
6.	Kumar Industries	Cotton Ginning and Cotton Sed Oil Cake	54,56,918	60
7.	Mohan Industries	Cotton Ginning	21,99,576	40
8.	Extract Engineering Works	Industrial Machinery Pollution Control Systems	55,47,194	30
9.	Siddeshwara Ferro Alloys	Ferro Manganese	Allied for sanction of State Subsidy	15
10.	Swamy Ayyappa Plastic Industries	Plastic Granuwells	-"-	5

(P.G. PRASAD)
Under Secretary to Govt.
Commerce & Industries Dept (Id)

ANNEXURE – B

THE DETAILS OF SUBSIDY SANCTIONED AND RELEASED IS AS FOLLOWS

Sl. No.	Name of the Industry	Amount Released	Date of Release
1.	M/s Mangala Agro Industries	4,19,410	11-6-91
2.	M/s S.D. Enterprises	74,100	30-11-92
3.	M/s Sumangala Agro Feeds (P) Ltd.	4,23,000	24-4-92
4.	M/s Aravali Marbles Industries	5,39,000	24-4-92
		5,48,600	17-7-92
		3,13,600	16-8-93
		23,17,710	
The details of units which were sanctioned subsidy and yet to realse is as follows:			
Sl. No.	Name of the Industry	Subsidy sanctioned	Date of sanction
1.	M/s Deshnoor Oil Industries	21,25,000	27-5-93
2.	M/s Kumar Industries	11,59,500	19-7-93
3.	M/s Mohan Industries	4,67,300	10-5-93
4.	M/s Extract Engineering Works	11,78,700	10-7-93
		49,30,500	

The Units which are submitted the application for sanction of Subsidy

1. M/s/ Siddeshwara Ferro Alloys(P) Ltd.
2. M/s. Ayyappaswamy Plastics Industries.

(P.G. PRASAD)
Under Secretary to Govt.
Commerce & Industries Dept.

ಶ್ರೀ ಎಸ್.ಹೆಚ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೆ, ಬ್ಯಾಕ್ವರ್ಡ್ ಏರಿಯಾಗಳಲ್ಲಿ ಇಂಡಸ್ಟ್ರೀಗಳನ್ನು ಮಾಡಿ ಅಲ್ಲಿನ ಜನರಿಗೆ ಉದ್ಯೋಗ ಕೊಡಬೇಕೆನ್ನುವ ಉದ್ದೇಶದಿಂದ ಅಲ್ಲಿ ತೆಗೆಯುವ ಇಂಡಸ್ಟ್ರೀಗಳಿಗೆ ಸಬ್ಸಿಡಿ ಕೊಡುತ್ತಿರೆ. ಅದೇ ಪ್ರಕಾರ ಬೇಲೂರಿನಲ್ಲಿ ಇಂಡಸ್ಟ್ರಿಗಳು ಬಂದಿವೆ. ಇವರಿಗೆ ಕೇಂದ್ರ ಸರ್ಕಾರದಿಂದ ಎಷ್ಟು ಸಬ್ಸಿಡಿ ಬಂದಿದೆ? ರಾಜ್ಯ ಸರ್ಕಾರದಿಂದ ಎಷ್ಟು ಸಬ್ಸಿಡಿ ಕೊಡಬೇಕಾಗಿದೆ. ಇನ್ನೆಷ್ಟು ದಿವಸಗಳಲ್ಲಿ ಕೊಡುತ್ತೀರಿ ಹಾಗೂ ಕೊಡುವುದಕ್ಕೆ ವಿಳಂಬ ಏಕೆ ಆಗಿದೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ : ಸನ್ಮಾನ್ಯ ಅಧ್ಯಕ್ಷರೆ, ಬೇಲೂರು ಗ್ರಾಮದಲ್ಲಿ ಅನೇಕ ಕೈಗಾರಿಕಾ ಉದ್ಯೋಗಿಗಳು ಕೈಗಾರಿಕೆಗಳನ್ನು ಪ್ರಾರಂಭ ಮಾಡಿದ್ದಾರೆ. ಇದರಲ್ಲಿ ಸಹಾಯಧನವನ್ನು ಕೊಡುವ ಬಗ್ಗೆ ಯಾರು ಯಾರಿಗೆ ಕೊಡಬೇಕೆಂದು ಪಟ್ಟಿಯನ್ನು ಉತ್ತರದೊಡನೆ ಲಗತ್ತಿಸಿದ್ದೇವೆ. ಈಗಾಗಲೇ ಸಾಕಷ್ಟು ಕೈಗಾರಿಕಾ ಉದ್ಯೋಗಿಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡಿದ್ದೇವೆ. ಇನ್ನು ಉಳಿದವರಿಗೆ ಇಷ್ಟರಲ್ಲೇ ಸಹಾಯ ಧನವನ್ನು ಬಿಡುಗಡೆ ಮಾಡುತ್ತೇವೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಸಹಾಯ ಧನ ಕೇಳಿ ದಿನಾಂಕ 31-4-93ರವರೆಗೆ ಬಂದಂಥ ಅರ್ಜಿಗಳನ್ನು ನಾವು ವಿಲೇವಾರಿ ಮಾಡಿದ್ದೇವೆ. ಪುನಃ ಏಪ್ರಿಲ್‌ನಿಂದ ಬಂದಂಥ ಅರ್ಜಿಗಳನ್ನು ಇನ್ನೂ ವಿಲೇವಾರಿ ಮಾಡುವಂಥಾದ್ದು ಇದೆ. ಸಹಾಯ ಧನ ಕೊಡುವುದರಲ್ಲಿ ಯಾವುದೇ ತರಹದಲ್ಲಿ ವಿಳಂಬವಾಗುತ್ತಿಲ್ಲ. ಈಗಾಗಲೇ ಅನುಮತಿ ಕೊಟ್ಟಿರುವ ಕೈಗಾರಿಕೊದ್ಯಮಿಗಳಿಗೆ ಸಧ್ಯದಲ್ಲೇ ಸಹಾಯ ಧನವನ್ನು ಬಿಡುಗಡೆ ಮಾಡುತ್ತೇವೆ ಎನ್ನುವ ವಿಚಾರವನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್.ಹೆಚ್. ಕೌಜಲಗಿ : ಕೇಂದ್ರ ಸರ್ಕಾರದಿಂದ ಬರುವ ಸಬ್ಸಿಡಿ ಮತ್ತು ರಾಜ್ಯ ಸರ್ಕಾರದಿಂದ ಕೊಡುವ ಸಬ್ಸಿಡಿ ಎರಡನ್ನೂ ಸೇರಿ ಕೊಡಲಾಗುತ್ತದೆ. ಕೇಂದ್ರ ಸರ್ಕಾರದಿಂದ ಬಂದಂಥ ಸಬ್ಸಿಡಿ ಹಣವನ್ನು ರಾಜ್ಯ ಸರ್ಕಾರದವರು ಬಳಸುವುದಕ್ಕೆ ಹತ್ತಿದ್ದಾರೆ. ಅಂದರೆ ಆ ಹಣವನ್ನು ಬೇರೆದಕ್ಕೆ ಉಪಯೋಗ ಮಾಡಿಕೊಂಡು ಆ ಇಂಡಸ್ಟ್ರಿಯವರಿಗೆ ಬೇಗ ಕೊಡುತ್ತಿಲ್ಲ. ಹೀಗಾಗಿ ಅಲ್ಲಿ ಇಂಡಸ್ಟ್ರೀ ಮಾಡಿರುವವರಿಗೆ ಬಹಳ ತೊಂದರೆಯಾಗುತ್ತಿದೆ. ಕೇಂದ್ರ ಸರ್ಕಾರದಿಂದ ಬಂದಂಥ ಸಬ್ಸಿಡಿ ಹಣವನ್ನು ರಾಜ್ಯ ಸರ್ಕಾರ ಬಳಸಿದ್ದು ನಿಜವೇ ಅಥವಾ ಇನ್ನೆಷ್ಟು ದಿವಸಗಳಲ್ಲಿ ಕೊಡುತ್ತೀರೆಂದು ಖಚಿತವಾಗಿ ಕೇಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ : ಸನ್ಮಾನ್ಯ ಅಧ್ಯಕ್ಷರೆ, ಕೇಂದ್ರದಿಂದ ಬರುವಂಥ ಸಬ್ಸಿಡಿ ಹಣವನ್ನು ಯಾವುದೇ ಕಾರಣಕ್ಕೆ ಬೇರೆ ಇಲಾಖೆಗೆ ಅಥವಾ ಬೇರೆ ಕೈಗಾರಿಕಾ ಕ್ಷೇತ್ರಗಳಿಗೆ ಉಪಯೋಗಿಸಲಿಲ್ಲ. ನಾವು ಕರ್ನಾಟಕ ರಾಜ್ಯ ಸರ್ಕಾರದಿಂದ ಪ್ರತಿ ತಿಂಗಳು 3 ಕೋಟಿ ರೂಪಾಯಿಗಳನ್ನು ಸಬ್ಸಿಡಿ ಹಣವಾಗಿ ಬಿಡುಗಡೆ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದೇವೆ. ಅದೇ ರೀತಿ ಪ್ರತಿ ತಿಂಗಳು 3 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ. ಹೋದ ತಿಂಗಳೂ ಹಣ ಬಿಡುಗಡೆ ಮಾಡಿದ್ದೇವೆ. ಈ ತಿಂಗಳೂ ಹಣ ಬಿಡುಗಡೆ ಮಾಡುತ್ತೇವೆ. ಆ ಹಣ ಬಿಡುಗಡೆಯಾದ ತಕ್ಷಣವೇ ಯಾವ ಅರ್ಜಿಗಳು ಬಂದು ಸಂಪೂರ್ಣವಾಗಿ ಹಣ ಬಿಡುಗಡೆ ಮಾಡುವ ಹಂತದಲ್ಲಿ ಇದೆಯೋ ಅದಕ್ಕೆಲ್ಲಾ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಜೊತೆಗೆ ವಿವರವಾದ ಪಟ್ಟಿಯನ್ನು ಉತ್ತರದೊಡನೆ ಲಗತ್ತಿಸಿದ್ದೇವೆ. ಎಷ್ಟು ಕೈಗಾರಿಕೋದ್ಯಮಿಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ ಎಷ್ಟು ಕೈಗಾರಿಕೋದ್ಯಮಿಗಳಿಗೆ ನಾವು ಹಣವನ್ನು ಬಿಡುಗಡೆ ಮಾಡಲಿದ್ದೇವೆ. ಎಷ್ಟು ಕೈಗಾರಿಕೋದ್ಯಮಿಗಳಿಗೆ ಹಣ ಬಿಡುಗಡೆ ಮಾಡುವ ಪ್ರಸ್ತಾವನೆ ನಮ್ಮ ಕೈಯಲ್ಲಿ ಇದೆ ಎಂಬ ಬಗ್ಗೆ ವಿವರಗಳನ್ನು ಕೊಟ್ಟಿದ್ದೇವೆ. ಅಧ್ಯಕ್ಷರೇ, ತಮ್ಮ

ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಬೇಲೂರು ಕೈಗಾರಿಕಾ ಕ್ಷೇತ್ರದಲ್ಲಿರುವ ಕೈಗಾರಿಕೋದ್ಯಮಗಳಿಗೆ 23 ಲಕ್ಷದ 17 ಸಾವಿರದ 710 ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ.

ಉಳಿದಂಥವರದ್ದು 25-7-1993 ರಿಂದ 10-7-1993ರವರೆಗೆ

ಅಧ್ಯಕ್ಷರು : ಅವರಿಗೆ ಉತ್ತರವನ್ನು ತಾವು ಕಳುಹಿಸಿಕೊಟ್ಟಿದ್ದೀರಲ್ಲಾ?

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ : ಹೌದು, ಉತ್ತರವನ್ನು ಕಳುಹಿಸಿಕೊಟ್ಟಿದ್ದೇನೆ. ಅದರಂತೆ ಉಳಿದಿರುವಂಥ ಹಣವನ್ನು ಸದ್ಯದಲ್ಲಿಯೇ ನಾವು ಬಿಡುಗಡೆ ಮಾಡಿಕೊಡುತ್ತೇವೆ ಎಂಬ ಭರವಸೆಯನ್ನು ತಮ್ಮ ಮೂಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ರೇಷ್ಮೆ ಇಲಾಖೆಯ ಮಹಿಳೆಯರಿಗೆ ವಿಶೇಷ ಘಟಕ ಯೋಜನೆ

507 - ಶ್ರೀ ಕೆ.ಸಿ. ಮೊಡಗೇಕರ್ ದೇಸಾಯಿ (ಹಿರೇಬಾಗೆವಾಡಿ) : ಮಾನ್ಯ ರೇಷ್ಮೆ, ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಇಲಾಖೆಯಲ್ಲಿ ಮಹಿಳೆಯರಿಗೆ ಯಾವುದಾದರೂ ವಿಶೇಷ ಘಟಕ ಯೋಜನೆ ಇದೆಯೇ?

ಆ) ಹಾಗಿದ್ದರೆ, ಈ ಯೋಜನೆ ಅಡಿಯಲ್ಲಿ ಬೆಳಗಾಂ ಜಿಲ್ಲೆಯಲ್ಲಿ 1991-92 ಮತ್ತು 92-93ರಲ್ಲಿ ತೆಗೆದುಕೊಂಡ ಕೆಲಸಗಳಾವುವು? (ತಾಲ್ಲೂಕುವಾರು ವಂಟನೆ ಹಂಚಿಕೆ ಒದಗಿಸಿ)

ಡಾ॥ ಜಿ. ಪರಮೇಶ್ವರ (ರೇಷ್ಮೆ, ಕೃಷಿ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

Sri K.C. MODGEKAR DESAI : Mr. Speaker Sir, the reply given by the Hon'ble Minister for Sericulture is not satisfactory. Previously there was a scheme called the Special Component Plan and under that Scheme the Government was extending loan facilities, giving subsidies for the construction of houses for silk worm rearing, alloting equipments and chemical manures and fertilizers for mulbery plantations. I do not understand as to why this good scheme has been withdrawn by the Government. Women play a very unique role in the development of our society. But, unfortunately, women still lagging behind and neglected. We always talk about 30% reservation for women in all the fields. Therefore, I ask the Hon'ble Minister and the Government to continue this Special Component Plant as far as Sericulture Development is concerned.

Dr. G. Parameswara : Mr. Speaker Sir, the question is that nearly 60% of the people who work in sericulture are women. The Hon'ble Member says that the Special Component Plan is stopped. It is not true, we have not stopped; it still continues. Secondly nearly Rs. 370 crores has been provided for this programme during the last year. Especially for women there is no programme as such in the Special Component Plan and we have not yet